ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಹೇಳಿಲ್ಲ

ಅಧ್ಯಕ್ಷರು: ಇನ್ನೊಂದು ಪ್ರಶ್ನೆಯಲ್ಲಿ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ನಿರಂತರ ಜ್ಯೋತಿ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ.

ಅಧ್ಯಕ್ಷರು: ಅವರು ಉತ್ತರ ಹೇಳಿದ್ದಾರೆ. ನೀವು ಕೇಳಿಲ್ಲವಷ್ಟೆ.

ಕು. ಶೋಭಾ ಕರಂದ್ಲಾಜೆ: ಗುಲ್ಬರ್ಗಾದಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಬರುವ ವರ್ಷದ ಈ ಹೊತ್ತಿಗೆ ಅಂದರೆ ಬರುವ ವರ್ಷದ ಫೆಬ್ರವರಿ ತಿಂಗಳೊಳಗಾಗಿ 1st and 2nd Phase ಅನ್ನು ಎಲ್ಲಾ ತಾಲ್ಲೂಕುಗಳಲ್ಲಿ ಪೂರ್ಣ ಮಾಡುತ್ತೇವೆ.

ಅಧ್ಯಕ್ಷರು: ಆಯಿತು. ಮುಂದಿನ ಪ್ರಶ್ನೆ ಮಾನ್ಯ ಹ್ಯಾರಿಸ್‌ರವರದು.

ರಾಜ್ಯದ ವಕ್ಫ್ ಬೋರ್ಡ್ ಜಾಗದ ಒತ್ತುವರಿ ಬಗ್ಗೆ

ಶ್ರೀ ಹ್ಯಾರಿಸ್ ಎನ್.ಎ. ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಕ್ಫ್ ಬೋರ್ಡ್‌ಗೆ ಸಂಬಂಧಿಸಿದ ಒತ್ತುವರಿಯಾದ ಜಮೀನಿನ ವಿಸ್ತೀರ್ಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಕಳೆದ ಮೂರು ವರ್ಷಗಳಲ್ಲಿ ತೆರವುಗೊಳಿಸಿದ ಜಮೀನುಗಳ ವಿವರ ನೀಡುವುದು)

ಇ) ವಕ್ಫ್ ಬೋರ್ಡ್‌ನ ಸ್ಥಿರ-ಚರ ಆಸ್ತಿಪಾಸ್ತಿಗಳನ್ನು ವ್ಯವಸ್ಥಿತವಾಗಿ ನೋಂದಣಿ ಮಾಡಿ ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ವಕ್ಫ್ ಮಂಡಳಿಗೆ ಸಂಬಂಧಿಸಿದ ಒತ್ತುವರಿಯಾದ ಜಮೀನಿನ ವಿಸ್ತೀರ್ಣ ಈ ಕೆಳಕಂಡಂತಿದೆ.

1. ಗ್ರಾಮೀಣ – 315 ಎಕರೆ – 25 ಗುಂಟೆ
2. ನಗರ ಪ್ರದೇಶ – 1,29,46,406 ಚ.ಅ.

(ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಒದಗಿಸಿದೆ)

ಆ) ವಕ್ಫ್ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸಲು ವಕ್ಫ್ ಕಾಯ್ದೆ 1995ರ ನಿಯಮ 54ರನ್ವಯ ಕ್ರಮ ಕೈಗೊಳ್ಳಲಾಗುವುದು. ಕಳೆದ ಮೂರು ವರ್ಷಗಳಲ್ಲಿ ಮೂರು ಜಮೀನುಗಳು ತೆರವುಗೊಳಿಸಿದೆ.

ಇ) ರಾಜ್ಯದಲ್ಲಿನ ವಕ್ಫ್ ಆಸ್ತಿಗಳನ್ನು ಸರ್ಕಾರದ ಇಲಾಖೆಗಳು ನಿಗಮ, ಮಂಡಳಿ ಮತ್ತು ಸ್ಥಳೀಯರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ವಕ್ಫ್ ಆಸ್ತಿಗೆ ಅಪಾರ ನಷ್ಟ ಉಂಟಾಗಿರುವುದು ಕಂಡುಬಂದಿರುವುದರಿಂದ, ರಾಜ್ಯದಲ್ಲಿನ ಒತ್ತುವರಿಯಾಗಿರುವ ವಕ್ಫ್ ಆಸ್ತಿಗಳನ್ನು ತೆರವುಗೊಳಿಸುವ ಬಗ್ಗೆ ಸಂರಕ್ಷಿಸುವ ಬಗ್ಗೆ ಹಾಗೂ ವಕ್ಫ್ ಆಸ್ತಿಗಳ ಖಾತೆ ಬದಲಾವಣೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಈ ಕೆಳಕಂಡ ಕ್ರಮವನ್ನು ವಹಿಸಲಾಗಿದೆ.

1. ವಕ್ಫ್ ಕಾಯ್ದೆ 1995ರ ಕಲಂ 54ರಂತೆ ಕಾನೂನಿನ ಕ್ರಮ ವಹಿಸಲಾಗಿದೆ.
2. ಮಾನ್ಯ ಸರ್ವೋಚ್ಚ ನ್ಯಾಯಾಲಯದ 1998ರ ಆದೇಶದಂತೆ, ವಕ್ಫ್ ಆಸ್ತಿಗಳನ್ನು ಪರಭಾರೆ ಮಾಡಲು ಅವಕಾಶವಿಲ್ಲದೆ ಇದ್ದು, ಸಂಬಂಧಿಸಿದವರಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಬಗ್ಗೆ ತಿಳುವಳಿಕೆಯನ್ನು ನೀಡಲಾಗಿದೆ.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳಿಗೆ ವಕ್ಫ್ ಆಸ್ತಿಗಳನ್ನು ಸಂರಕ್ಷಿಸುವ ಬಗ್ಗೆ ಆಡಳಿತಾತ್ಮಕವಾಗಿ ಹಲವಾರು ಸುತ್ತೋಲೆಗಳನ್ನು ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಯವರುಗಳಿಂದ ಹೊರಡಿಸಲಾಗಿದೆ.
4. ರಾಜ್ಯ ವಕ್ಫ್ ಸಂಸ್ಥೆಗಳ ಮುತವಲ್ಲಿ ಹಾಗೂ ಆಡಳಿತಾಧಿಕಾರಿಗಳ ಸಮ್ಮೇಳನವನ್ನು ಆಯೋಜಿಸಿ ರಾಜ್ಯದ ವಕ್ಫ್ ಆಸ್ತಿಗಳನ್ನು ಸಂರಕ್ಷಿಸುವ ಬಗ್ಗೆ ಸೂಕ್ತ ಸಲಹೆ ಹಾಗೂ ಸೂಚನೆಗಳನ್ನು ನೀಡಲಾಗಿದೆ.
5. ರಾಜ್ಯದ ಜಿಲ್ಲಾ ಅಧ್ಯಕ್ಷರುಗಳು ಹಾಗೂ ಜಿಲ್ಲಾ ವಕ್ಫ್ ಅಧಿಕಾರಿಗಳ ಸಮ್ಮೇಳವನ್ನು ಆಯೋಜಿಸಿ, ರಾಜ್ಯದಲ್ಲಿನ ವಕ್ಫ್ ಸಂಪತ್ತನ್ನು ಕಾಪಾಡಲು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಅವರು ಕೊಟ್ಟಿರುವ ಉತ್ತರ ಬೇಕೋ ಅಥವಾ ಬೇಡವೋ ಎನ್ನುವ ರೀತಿಯಲ್ಲಿ ಇದೆ. ಜಿಲ್ಲಾವಾರು ವಿವರ ನೀಡುವ ಬಗ್ಗೆ ಮೊದಲನೇ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಬೆಂಗಳೂರು ನಗರ ಪ್ರದೇಶ 1,27,40,557 ಚ.ಅ. ಎಂದು ಉತ್ತರ ಕೊಟ್ಟಿದ್ದೀರಿ. ನನಗೆ ಗೊತ್ತಿರುವ ಹಾಗೆ ಬೆಂಗಳೂರು ನಗರ ಒಂದರಲ್ಲಿಯೇ ಮಾಣಿಕ್ ಶಾ ಬೆಲ್ಲಳ್ಳಿ ಸರ್ವೆ ನಂಬರ್ 55ರಲ್ಲಿ 650 ಎಕರೆ ಯಷ್ಟು ಜಮೀನು ವಕ್ಫ್ ಬೋರ್ಡ್‌ಗೆ ಬಂದಿಲ್ಲ. ನೀವು ಕೊಟ್ಟಿರುವ ಮಾಹಿತಿಯಲ್ಲಿ 1,27,40,557 ಚ.ಅ. ಎಂದರೆ 297 ಎಕರೆ ಮಾತ್ರ ಆಗುತ್ತದೆ. 600 ಎಕರೆ ಎಲ್ಲಿಗೆ ಹೋಯಿತೆಂಬುದು ಗೊತ್ತಾಗಲಿಲ್ಲ. Sq.ft. ಇಷ್ಟು ಮತ್ತು Sq.mt. ಹಾಗು ಎಕರೆ ಲೆಕ್ಕದಲ್ಲಿ ಭೂಮಿ ಎಷ್ಟಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಇದರ ಬಗ್ಗೆ ಹೇಳಬೇಕಾದರೆ, ಅಕ್ಬರ್ ಮತ್ತು ಬೀರ್‌ಬಲ್ ನಡೆದುಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಯಾರೊಬ್ಬ ಬಂದು ಊರಲ್ಲಿ ಎಷ್ಟು ಕಾಗೆ ಇವೆ ಎಂದು ಎಣಿಸಿ ಹೇಳುವುದಕ್ಕೆ ಆಗುತ್ತದೆಯೇ ಎಂದು ಕೇಳಿದನಂತೆ. ಇದೇನು ದೊಡ್ಡ ವಿಚಾರವಲ್ಲ ಎಷ್ಟು ಕಾಗೆಗಳಿವೆ ಎಂದು ಹೇಳುತ್ತೇನೆಂದು ಒಂದು ಸಂಖ್ಯೆಯನ್ನು ಬೀರ್‌ಬಲ್ ಹೇಳಿದರಂತೆ.

ಅಧ್ಯಕ್ಷರು: ಈ ರೀತಿಯಾಗಿ ಭಾಷಣ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಇವರು ಕೊಟ್ಟಿರುವ ಉತ್ತರ ಕೂಡ ಅದೇ ರೀತಿಯಲ್ಲಿದೆ. ಏನಾದರೊಂದು ಕ್ಲಿಯರ್ ಆಗಿ ಮಾಹಿತಿ ಬೇಕಲ್ಲವೆ? ಅದರ ಸರ್ವೆ ನಂಬರ್ ಅನ್ನು ಹೇಳಬೇಕಲ್ಲವೆ?

ಅಧ್ಯಕ್ಷರು: ನಿಮ್ಮ ಕ್ಲಾರಿಫಿಕೇಷನ್ ಏನು?

ಶ್ರೀ ಎನ್.ಎ. ಹ್ಯಾರಿಸ್: ಡೀಟೆಲ್ಸ್ ಕೇಳಿದ್ದೇವೆ. ಡೀಟೆಲ್ಸ್ ಉತ್ತರ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ನಿಮ್ಮ ಕ್ಲಾರಿಫಿಕೇಷನ್ ಏನು?

ಶ್ರೀ ಎನ್.ಎ. ಹ್ಯಾರಿಸ್: ಮಾತನಾಡುವುದಕ್ಕೆ ತಾವು ಬಿಡದಿದ್ದರೆ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು: ಮಾತನಾಡಬಾರದೆಂದು ನಾನು ಹೇಳುತ್ತಿಲ್ಲ. ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಎನ್.ಎ. ಹ್ಯಾರಿಸ್: ಅವರು ಏನೇನೋ ಉತ್ತರ ಕೊಟ್ಟರೆ ಅದನ್ನು ಕೇಳಿಕೊಂಡು ನಾವು ಹೋಗಬೇಕೆ?

ಅಧ್ಯಕ್ಷರು: ಈಗಾಗಲೇ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ ಒಂದು ಗಂಟೆ ಆಗಿದೆ. ಆದ್ದರಿಂದ, ಪ್ರಶ್ನೋತ್ತರ ಅವಧಿ ಮುಗಿಯಿತು. ಬೇರೆ ಪ್ರಶ್ನೆಗೆ ಅವಕಾಶ ಆಗುವುದಿಲ್ಲ. ಮಾನ್ಯ ಸಚಿವರೆ, ತಾವು ಉತ್ತರ ಕೊಡಿ. ಕ್ಲಾರಿಫಿಕೇಷನ್ ಕೇಳಿ ಎಂದರೆ ತಾವು ಎಲ್ಲವನ್ನು ಓದುತ್ತಾ ಹೋದರೆ ಹೇಗೆ?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್: ಮಾನ್ಯ ಅಧ್ಯಕ್ಷರೆ, ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸಮಂಜಸವಾದಂಥ ಉತ್ತರವನ್ನು ಕೊಟ್ಟಿದ್ದೇನೆ. ಬೀರ್‌ಬಲ್ ಮತ್ತು ಅಕ್ಬರ್‌ನ ಕತೆ ಇಲ್ಲಿ ಅನ್ವಯಿಸುವುದಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಬೆಲ್ಲಳ್ಳಿಯ 600 ಎಕರೆ ಇರುವುದು ನಮಗೂ ಮತ್ತು ಇಡೀ ಸಮಾಜಕ್ಕೂ ಸಹ ಗೊತ್ತಿದೆ. ಇದನ್ನು ಹೈ ಕೋರ್ಟ್‌ನಲ್ಲಿ ತಡೆಹಿಡಿದಿದ್ದಾರೆ. ಇದು ನಮ್ಮ ವಶಕ್ಕೆ ಇನ್ನು ಬಂದಿಲ್ಲದೆ ಇರುವುದರಿಂದ ಇದರ ಬಗ್ಗೆ ಕಾಯ್ದು ನೋಡಬೇಕಾಗಿದೆ. ಈಗ ಕೊಟ್ಟಿರುವ ಅಂಕಿ-ಅಂಶಗಳಲ್ಲಿ ಏನಾದರು ನೂನ್ಯತೆ ಕಂಡು ಬಂದರೆ ಅದನ್ನು ಸರಿಪಡಿಸುವುದಕ್ಕೆ ನಾನು ಸಿದ್ದನಿದ್ದೇನೆ.

ಶ್ರೀ ಎಸ್.ಆರ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಬೆಲ್ಲಳ್ಳಿಯ ಸರ್ವೆ ನಂ.55ರಲ್ಲಿ 177 ಎಕರೆ ಸರ್ಕಾರಿ ಜಾಗ ಇದೆ. ಇದು ವಕ್ಫ್ ಬೋರ್ಡ್ ಜಾಗವೆಂದು ಸಹ ಇದೆ. ಸರ್ಕಾರಿ ಜಾಗವೆಂದು ಬೋಗಸ್ ಗ್ರಾಂಟ್ ಅನ್ನು ಮಾಡಿ ಅಲ್ಲಿ ಬೇಕಾದಷ್ಟು ಜನ ದಾಖಲೆಗಳನ್ನು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಒಂದು ಮನವಿ ಪತ್ರವನ್ನು ತೆಗೆದುಕೊಂಡು ಹೋಗಿದ್ದೆವು. ಜಿಲ್ಲಾಧಿಕಾರಿಗಳು ಇದರ ಬಗ್ಗೆ ತನಿಖೆ ಮಾಡಿ ಎಲ್ಲರಿಗೂ ನೋಟೀಸ್ ಕೊಟ್ಟಿದ್ದಾರೆ. ಮತ್ತೆ 136(3) ಅಡಿಯಲ್ಲಿ ಕೇಸ್ ದಾಖಲು ಮಾಡಿದ್ದು, 177 ಎಕರೆ ಜಾಗವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂಬ ಅಂತಿಮ ಹಂತದಲ್ಲಿದೆ. ಇದೆಲ್ಲಾ ಆದ ಮೇಲೆ ಇದು ನಮ್ಮ ಜಾಗವೆಂದು ವಕ್ಫ್ ಬೋರ್ಡ್‌ನವರು ಹೈಕೋರ್ಟ್‌ಗೆ ಹೋಗಿದ್ದಾರೆ. ಒಟ್ಟಿನಲ್ಲಿ ಈ ಜಾಗ ವಕ್ಫ್ ಬೋರ್ಡ್‌ಗೆ ಹೋಗಲಿ ಅಥವಾ ಸರ್ಕಾರಕ್ಕಾದರು ಬರಬೇಕು. ಪೂರ್ಣವಾಗಿ ಇದು ಸರ್ಕಾರಿ ಜಾಗವಾಗಿದೆ. ಆದ್ದರಿಂದ, ಈ ಸರ್ಕಾರಿ ಜಾಗವನ್ನು ಸರ್ಕಾರ ಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಎ.ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಅದು ವಕ್ಫ್ ಬೋರ್ಡ್ ಜಾಗವಾಗಿದೆ. ಆದ್ದರಿಂದ ವಕ್ಫ್ ಬೋರ್ಡ್ ಜಾಗದಲ್ಲಿ ಇದನ್ನು ಸಹ ಸೇರಿಸಬೇಕು. ಆದರೆ, ಬೇಕಾದರೆ ಇದನ್ನು ಸೇರಿಸುತ್ತೇನೆಂದು ಹೇಳತಕ್ಕಂಥದ್ದು ತಪ್ಪಾಗುತ್ತದೆ. ಇದನ್ನು ಕೂಡ ಸೇರಿಸಬೇಕು. ನಮ್ಮ ಸ್ನೇಹಿತರಾದ ಶ್ರೀ ವಿಶ್ವನಾಥ್‌ರವರು ಹೇಳಿ ಹಾಗೆ ವಕ್ಫ್ ಬೋರ್ಡ್ ಜಾಗ ಇರುವುದನ್ನು ಸರ್ಕಾರಿ ಜಾಗ ಎಂದು ಎಂಟ್ರಿ ಮಾಡಿರಬಹುದು. ವಕ್ಫ್ ಬೋರ್ಡ್‌ಗೆ ಸೇರಿದ್ದರೆ ಆ ಜಾಗವನ್ನು ವಕ್ಫ್ ಬೋರ್ಡ್‌ಗೆ ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡಲಿ. ವಕ್ಫ್ ಬೋರ್ಡ್ ಜಮೀನು ಆಗಿರುವುದರಿಂದ ಇದೂ ಕೂಡ ವಕ್ಫ್ ಬೋರ್ಡ್ ಜಮೀನು ಎಂದು ಹೇಳಬೇಕಾಗಿತ್ತು. ಮಾಹಿತಿಯಲ್ಲಿ ನೀವೇ ಅದನ್ನು ಸೇರಿಸದಿದ್ದರೆ ಮತ್ಯಾರು ಸೇರಿಸುತ್ತಾರೆ? ಇದನ್ನು ಹೇಗೆ ವಾಪಸ್ಸು ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ ನಾವು ಸುತ್ತೋಲೆಯನ್ನು ಕಳುಹಿಸಿದ್ದೇವೆ ಮತ್ತೆ ಇದರ ಬಗ್ಗೆ ಸಭೆಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವೇನಾದರು ಇದರ ಬಗ್ಗೆ ಜಾಸ್ತಿ ಮಾತನಾಡಿದರೆ 50 ವರ್ಷಗಳಿಂದ ನೀವೇನು ಮಾಡಿದ್ದೀರಿ ಎಂದು ಕೇಳುತ್ತೀರಿ. ಆ ಪ್ರಶ್ನೆ ಇಲ್ಲಿ ಬೇಡ. ನೀವು ಇಲ್ಲಿ ಏನು ಮಾಡುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, What is the extent of State Wakf land encroached? ಎಂದು ಮತ್ತು What action taken by the Government for eviction of encroached Wakf land ಎಂಬ ಪ್ರಶ್ನೆಗೆ ಹಾಗೂ Total area of Wakf properties encroached in the State ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ, ಮಾನ್ಯ ಸಚಿವರಿಗೆ ಅಧಿಕಾರಿಗಳು ಬರೆದುಕೊಟ್ಟಿರುವ ಉತ್ತರವನ್ನು ಹೇಳಿದ್ದಾರೆ. ಮಾನ್ಯ ಸಚಿವರಿಗೆ Common sense ಇಲ್ಲವೆಂದು ಕಾಣುತ್ತದೆ. ಇವರು ಪ್ರೊಫೆಸರ್ ಮತ್ತು ಡಾಕ್ಟರ್ ಇರಬಹುದು. But common sense is not very common. ಅವರು ಕೊಟ್ಟಿರುವ ಉತ್ತರ ನನಗೆ ಬಹಳ ನಾಚಿಕೆ ಆಗುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಪಸಂಖ್ಯಾತ ಶಾಸಕರು ಯಾರ್ಯಾರು ಇದ್ದೇವೆ ಅವರೆಲ್ಲರನ್ನು ಕರೆದು ವಕ್ಫ್ ಬೋರ್ಡ್ ಬಗ್ಗೆ ದಯವಿಟ್ಟು ಒಂದು ಸಭೆಯನ್ನು ಮಾಡಿ. ಮಾನ್ಯ ಸಚಿವರು ನೀಡಿರುವ ಈ ರೀತಿಯಾದ ಹೇಳಿಕೆ

ನನಗೆ ನಿಜವಾಗಿಯೂ ಕೂಡ ಬೇಜಾರಾಗುತ್ತದೆ. ಇಂಥ ರಿಪ್ಲೈ ಅನ್ನು ನಾನು ಎಣಿಸಿರಲಿಲ್ಲ.

(ಮಾನ್ಯ [illegible]ವರು ನೀಡಿರುವ ಉತ್ತರದ ಪ್ರತಿಯನ್ನು ಮಾನ್ಯ ರೋಷನ್ ಬೇಗ್‌ರವರು ಈ ಹಂತದಲ್ಲಿ ಹರಿದು ಹಾಕಿದರು)

ಈ ಬಗ್ಗೆ ಯಾವ್ಯೋತ್ತಾದರೂ ನಮ್ಮನ್ನು ಕರೆದು ಮಾತನಾಡಿದ್ದಾರಾ? ಇಷ್ಟೊಂದು land encroach ಆಗಿದೆ ಎಂದು ಒಂದು ರಿಪ್ಲೈ ಕೊಟ್ಟು ಬಿಡುವುದಾ? ಬೆಂಗಳೂರಿನಲ್ಲಿ ಇಷ್ಟೆ ಇಷ್ಟು sq.ft. encroach ಆಗಿದೆ ಎಂದು ಉತ್ತರ ಕೊಡುತ್ತಾರೆ common sense ಇಲ್ಲವೆ? ಇಷ್ಟು ವರ್ಷದಿಂದ ಅವರು ಸುಮ್ಮನೆ ಬೆಂಗಳೂರಿನಲ್ಲಿದ್ದಾರೆ. ಬೆಂಗಳೂರಿನಲ್ಲಿ ಎಷ್ಟು land encroach ಆಗಿದೆ ಎನ್ನುವುದು ಗೊತ್ತಾಗುವುದು ಬೇಡವೆ? ಅಧಿಕಾರಿ ಏನು ಬರೆದು ಕೊಡುತ್ತಾರೆ ಅದನ್ನು ಹೇಳಿ ಬಿಡುವುದೆ? I feel very sorry.

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್: ಮಾನ್ಯ ಅಧ್ಯಕ್ಷರೆ, ಆಕ್ರೋಶದಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಒಬ್ಬ ವ್ಯಕ್ತಿಗೆ ಜ್ಞಾನ ಇದೆ.. ನಾನು ಹೇಳುವುದನ್ನು ನಾನು ಹೇಳುತ್ತೇನೆ. ನಾನು ಪ್ರೊಫೆಸರ್ ಆಗಿರಬಹುದು. ನನಗೆ common sense ಇಲ್ಲದೆ ಪ್ರೊಫೆಸರ್ ಆಗುವುದಕ್ಕೆ ಸಾಧ್ಯವಿಲ್ಲ. ಈಗ ನಿಮಗೆ ಉತ್ತರ ಹೇಳುತ್ತೇನೆ. ನಾವು ಕ್ರಮ ತೆಗೆದುಕೊಂಡಿದ್ದೇವೆ.

(ಗೊಂದಲ)

ಏಕೆ ಮಾಡಿಲ್ಲವೆಂದರೆ, ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಆಯಿತು ಉತ್ತರ ಕೊಡಿ.

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್: ನಮ್ಮ ಸರ್ಕಾರ ಬಂದ ಮೇಲೆ ಸೂಕ್ತ ಕ್ರಮ ಕೈಗೊಂಡು ಮೂರು ಕಡೆ ಒತ್ತುವರಿ ಆಗಿರುವುದನ್ನು ನಾವು ವಶಕ್ಕೆ ತೆಗೆದುಕೊಂಡಿರುತ್ತೇವೆ. ಹಿಂದಿನಿಂದಲೂ ಆಗಿರಲಿಲ್ಲ. 1995 ಆಕ್ಟ್‌ನ ಅಧೀನದಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪು ಕೊಟ್ಟಿದೆ. Wakf property cannot be alienated in any form at any cost to anybody. ಈ ಒಂದು ಆಧಾರ ಇಟ್ಟುಕೊಂಡು ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ನಾವು ಚರ್ಚೆ ಮಾಡಿದ್ದೇವೆ. ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ನಾವು ಆದಷ್ಟು ಮಟ್ಟಿಗೆ ನಾವು ತೆಗೆದುಕೊಳ್ಳಬೇಕೆಂದು ಹೇಳಿ ಮುಖ್ಯ ಮಂತ್ರಿಗಳ ಒಂದು ಸಲಹೆ ಮೇಲೆ ನಮ್ಮ ಕಾರ್ಯದರ್ಶಿಗಳು ಒಂದು

ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಸುತ್ತೋಲೆಯ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈಗ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಮುಖ್ಯಮಂತ್ರಿಗಳು ಒಂದು ಮೀಟಿಂಗ್ ಕರೆಯಬೇಕು.

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್: ಮೀಟಿಂಗ್ ಕರೆಯುವುದು ಬಿಡುವುದು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಿಮಗೆ ಬಿಟ್ಟಿದ್ದು, ಉತ್ತರ ಕೊಡುವುದು ನನ್ನ ಕರ್ತವ್ಯ, ನಾನು ಉತ್ತರ ಕೊಡುತ್ತಿದ್ದೇನೆ. ನನ್ನ ಉತ್ತರ ಸಮಂಜಸವಿಲ್ಲವೆಂದರೆ ನಾನೇನು ಹೇಳುವುದಕ್ಕೆ ಆಗುವುದಿಲ್ಲ. ನಾನು ಪ್ರಾಮಾಣಿಕವಾಗಿ ಉತ್ತರ ಕೊಡುತ್ತಿದ್ದೇನೆ. ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿರುತ್ತೇನೆ. ನಾನು ಇಲ್ಲಿ ಸುಮ್ಮನೆ ಬಂದು ಮಾತನಾಡುತ್ತಿಲ್ಲ. ಮಾತಿಗೆ ಅರ್ಥ ಉಂಟು, ಬೆಲೆ ಉಂಟು, ಮೌಲ್ಯ ಉಂಟು. ನಾನು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎನ್.ಎ. ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ವಕ್ಫ್ ಬೋರ್ಡ್ ಪ್ರಾಪರ್ಟಿಯನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏನಾದರೂ ಕ್ರಮ ಕೈಗೊಂಡಿರುತ್ತಾರಾ?

ಅಧ್ಯಕ್ಷರು: ಪ್ರಶ್ನೋತ್ತರ ಸಮಯವೇ ಮುಗಿದು ಹೋಗಿದೆ. 1 ಗಂಟೆ 10 ನಿಮಿಷ ಆಗಿದೆ.

ಶ್ರೀ ಎನ್.ಎ.ಹ್ಯಾರೀಸ್: ನಾವು ಮಾತನಾಡುವಾಗಲೇ ಸಮಯ ಮುಗಿದು ಹೋಗಿಬಿಟ್ಟರೆ ಏನು ಅರ್ಥ ಸಾರ್?

ಅಧ್ಯಕ್ಷರು: ನೀವು ಒಂದು ಪ್ರಶ್ನೆಗೆ ಒಂದು ಹತ್ತು ನಿಮಿಷ... ಮಾನ್ಯ ರಾಮಲಿಂಗಾ ರೆಡ್ಡಿಯವರು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: ಇದರ ಬಗ್ಗೆ ಒಂದು ಸಭೆ ಕರೆಯಿರಿ.

ಶ್ರೀ ಎನ್.ಎ. ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೆ ಇದರ ಬಗ್ಗೆ ಒಂದು ಸಭೆ ಕರೆಯಿರಿ. ನೀವು ನಮಗೆ ಸ್ವಲ್ಪ ಟೈಮ್ ಕೊಡಿ. ನೀವು ಕುಳಿತುಕೊಳ್ಳಿ ಎಂದರೆ ನಾವು ಕುಳಿತುಕೊಳ್ಳುತ್ತೇವೆ. ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಏನು ಮಾಡುವುದು?